ತರುತ್ತಿದ್ದೇನೆ. For Drinking purpose it is very very important for our villages in Raichur District.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ನಾನು ಬೃಹತ್ ನೀರಾವರಿ ಸಚಿವರು ಬಂದ ಮೇಲೆ ಅವರನ್ನು ಕರೆಸಿ ಮಾತನಾಡಿ ಇದಕ್ಕೆ ಏನು ಪರಿಹಾರ ಒದಗಿಸಬೇಕೆನ್ನುವ ಪ್ರಯತ್ನ ಮಾಡುತ್ತೇನೆ.

ಶ್ರೀ ಸೈಯದ್ ಯಾಸಿನ್ :– ಬಹಳ ಸಂತೋಷ ಸಾರ್.

5. ವಿಷಯ : ಹಾಸನದ ಇಂಜಿನಿಯರಿಂಗ್ ಕಾಲೇಜಿಗೆ ಮೂಲಭೂತ ಸೌಲಭ್ಯವನ್ನು ಒದಗಿಸಿ ಕೊಡುವ ಬಗ್ಗೆ :–

ಅಧ್ಯಕ್ಷರು :– ಮಾನ್ಯ ರೇವಣ್ಣನವರು ಮಾತನಾಡುವುದು.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) :– ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ Engineering College open ಆಗಿ ಒಂದೂವರೆ ವರ್ಷ ಆಯಿತು. Open ಮಾಡಿ ಉದ್ಘಾಟನೆ ಎಲ್ಲಾ ಆಗಿದೆ. ಆದರೆ ಅದರ ಒಳಗಡೆ ಕಾಡು ಬೆಳೆದ ರೀತಿ ಬೆಳೆದಿದೆ. ಆ ಕಾಲೇಜ್‌ಗೆ ಕೇವಲ ಹಾಸನದಿಂದ ವಿದ್ಯಾರ್ಥಿಗಳು ಬರುವುದಿಲ್ಲ. ಸಿ.ಇ.ಟಿ. ಮೂಲಕ ಹೊರಗಡೆಯಿಂದಲೂ ಬರುತ್ತಾರೆ. ಉದ್ಘಾಟನೆಯಾಗಿ ಒಂದೂವರೆ ವರ್ಷ ಆಯಿತು. ಅದಕ್ಕೆ ಮೂಲಭೂತ ಸೌಕರ್ಯಗಳು ಇಲ್ಲ. ಅದನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಏಕೆಂದರೆ ಶಿಕ್ಷಣ ಸಚಿವರು ಅವರೇ ಆಗಿದ್ದಾರೆ. ಮೂಲಭೂತ ಸೌಕರ್ಯ ಒದಗಿಸಲು ಹಾಗೂ ಗಿಡ ಕೀಳುವುದಕ್ಕೆ ನಾವೆಲ್ಲಾ ಶಾಸಕರು ಹೋಗಿ ಅದಕ್ಕೆ 50 ಲಕ್ಷ ರೂಪಾಯಿ release ಮಾಡುವುದಕ್ಕಾಗಿ ಒಂದು ಅರ್ಜಿ ಕೊಟ್ಟಿದ್ದೇವೆ. Desk ಗಳು ಇಲ್ಲ. ಪುಸ್ತಕಗಳು ಇಲ್ಲ, ಅಲ್ಲಿ ಏನೂ ಮೂಲಭೂತ ಸೌಕರ್ಯಗಳು ಇಲ್ಲ. ಆದ್ದರಿಂದ ದಯಮಾಡಿ ಇವತ್ತೇ ಶಿಕ್ಷಣ ಕಾರ್ಯದರ್ಶಿಗಳಿಗೆ ಹೇಳಿ ಮಾಡಿಸಿಕೊಡಬೇಕು.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಪ್ರಾಯಶಃ ಮಾನ್ಯ ರೇವಣ್ಣನವರು ತುಂಬಾ ಪುಣ್ಯವಂತರು ಎಂದು ನಾನು ಭಾವಿಸುತ್ತೇನೆ. ಬಾಕಿ ಎಲ್ಲಾ ಕಾಲೇಜುಗಳಿಗಿಂತಲೂ ಒಳ್ಳೆಯ ರೀತಿಯಲ್ಲಿ ಮತ್ತು ಹೆಚ್ಚು ಅನುದಾನ ಪಡೆದುಕೊಂಡಿರುವುದರಲ್ಲಿ ಹಾಸನ ಇಂಜಿನಿಯರಿಂಗ್ ಕಾಲೇಜು ಒಂದು. ದಿನಾಂಕ 25–5–2007 ರಲ್ಲಿ ಪ್ರಾರಂಭವಾದಂತಹ ಇಂಜಿನಿಯರಿಂಗ್ ಕಾಲೇಜು ಸುಮಾರು 38–39 ಎಕರೆ ಜಮೀನು ಹೊಂದಿದೆ.

ಇದಕ್ಕೆ ಇಲ್ಲಿಯತನಕ 60 ಕೋಟಿ ರೂಪಾಯಿಗಳನ್ನು, ಕೇವಲ 4 ವರ್ಷಗಳಲ್ಲಿ ವೆಚ್ಚ ಮಾಡಿದ್ದೇವೆ. ಸುಮಾರು 56 ಕೋಟಿ ರೂಪಾಯಿಗಳಲ್ಲಿ ಕಟ್ಟಡ ಕಾಮಗಾರಿಗಳನ್ನು ಮಾಡಲಾಗಿದೆ. 32 ತರಗತಿ ಕೊಠಡಿಗಳು, 25 ಪ್ರಯೋಗಾಲಯಗಳು, 30 ವಿಭಾಗಗಳ ಮುಖ್ಯಸ್ಥರ ಮತ್ತು ಬೋದಕೇತರ ಕೊಠಡಿಗಳು, 2 ಲೈಬ್ರರಿಗಳು, 3 drawing rooms, ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಿಶ್ರಾಂತಿ ಕೊಠಡಿಗಳು, internet ವ್ಯವಸ್ಥೆ 132 computer lab ಗಳು 3,859 ಪುಸ್ತಕ ಇರುವಂತಹ ಸುಸಜ್ಜಿತವಾದ ಗ್ರಂಥಾಲಯ ಇದೆ. ಉಳಿದ ಕಾಲೇಜುಗಳಿಗೆ ಹೋಲಿಸಿದರೆ ಅತ್ಯಂತ ಆದ್ಭುತವಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ ....

ಶ್ರೀ ಡಿ.ವಿ. ಸದಾನಂದಗೌಡ :– ಒಂದು ನಿಮಿಷ ಕುಳಿತುಕೊಳ್ಳಿ ಸಾರ್ ನಾನು ಮಾತನಾಡಿ ಮುಗಿಸಿಬಿಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ :– ನಾವು ದುಡ್ಡು ಕೊಟ್ಟು desk ಕೊಡಿಸಿದ್ದೇವೆ. ಸಾರ್ವಜನಿಕರ 10 ಲಕ್ಷ ರೂಪಾಯಿಯಲ್ಲಿ desk ಕೊಡಿಸಿದ್ದೇವೆ.

ಶ್ರೀ ಡಿ.ವಿ. ಸದಾನಂದಗೌಡ :– ಒಂದು ನಿಮಿಷ ಕುಳಿತುಕೊಳ್ಳಿ ಸಾರ್. ನಿಮ ಪರವಾಗಿಯೇ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು :– ಮಾನ್ಯ ರೇವಣ್ಣನವರೆ ಮಾನ್ಯಮುಖ್ಯಮಂತ್ರಿಯವರು ಹೇಳುವುದಕ್ಕೆ ಅವಕಾಶ ಕೊಡುತ್ತಿಲ್ಲವಲ್ಲಾ ?

ಶ್ರೀ ಡಿ.ವಿ. ಸದಾನಂದಗೌಡ :– ಅಲ್ಲಿಯ ಫಲಿತಾಂಶ ನೋಡಿ ಎಷ್ಟು ಚೆನ್ನಾಗಿದೆ. Mechanical 92.42% Civil ನಲ್ಲಿ 84.4% Computer Science ನಲ್ಲಿ 87%, ನಲ್ಲಿ Electronics and Communications ನಲ್ಲಿ 80% ಎಲ್ಲಾ 80% ಗಿಂತ ಮೇಲೆ. ಅಲ್ಲಿಯ ವಿದ್ಯಾರ್ಥಿಗಳಿಗೆ ಎಲ್ಲಾ ಒಳ್ಳೆಯ ಮೂಲಭೂತ ಸೌಕರ್ಯ ಕೊಟ್ಟಿದ್ದು ಮತ್ತು Faculty ಉತ್ತಮವಾಗಿ ಕೊಟ್ಟಿರುವ ಕಾರಣ ಇಷ್ಟೆಲ್ಲಾ ಬಂದಿದೆ. ಆದರೂ ಕೂಡ ನಮ್ಮ ರೇವಣ್ಣನವರಿಗೆ ಅದು international standard ಇರಬೇಕೆಂದು ಎನ್ನುವ ಭಾವನೆ ಇದೆ. ಇದಕ್ಕೆ ಬೇಕಾದಂತಹ ಎಲ್ಲಾ ಸಹಕಾರಗಳನ್ನು ಸರ್ಕಾರದ ಕಡೆಯಿಂದ ಕೊಡಲಿಕ್ಕೆ ನಾವು ಬದ್ಧರಿದ್ದೇವೆ. ಅದನ್ನು ಹಂತ ಹಂತವಾಗಿ ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ :– ನಾನೇನೂ international stadnard ಮಾಡಿ ಎಂದು ಹೇಳಲಿಲ್ಲ.

ಅಧ್ಯಕ್ಷರು :– ಆಯಿತು, ಶೂನ್ಯ ವೇಳೆಯಲ್ಲಿ ಹೇಳಿದ್ದೀರಿ ಸಾಕು.

ಶ್ರೀ ಹೆಚ್.ಡಿ. ರೇವಣ್ಣ : ಒಂದು ಎರಡು ನಿಮಿಷ ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಬಿಡುತ್ತೇನೆ.

ಅಧ್ಯಕ್ಷರು : ಹೇಳಿದರಲ್ಲಾ

ಶ್ರೀ ಹೆಚ್.ಡಿ. ರೇವಣ್ಣ :– ಕಟ್ಟಡ ಕಟ್ಟಿರುವುದು ಎಲ್ಲಾ ನಿಜ. ಆದರೆ computer desk ಗಳನ್ನೆಲ್ಲಾ ಕೆಲವು ದಾನಿಗಳು ಕೊಟ್ಟಿದ್ದಾರೆ. ಇವತ್ತಿನವರೆಗೂ ಸರ್ಕಾರದಿಂದ ಒಂದು desk ಕೊಟ್ಟಿಲ್ಲ. ಒಂದೂವರೆ ವರ್ಷ ಆಯಿತು. ಕಟ್ಟಡ ಕಟ್ಟಿ. ಅದರ ಒಳಗೆ ಹೋಗುವುದಕ್ಕೆ ಆಗಿರಲಿಲ್ಲ.

ಅಲ್ಲಿ ಮೇಲುಗಡೆ ಒಳಗಡೆ ಕಾಡು ಬೆಳೆದ ಹಾಗೆ ಬೆಳೆದಿದೆ. ಅಲ್ಲಿ ಹಾವುಗಳು ಸೇರಿಕೊಂಡಿದೆ. ಕೂಡಲೆ ಅಲ್ಲಿ ಸ್ವಚ್ಛ ಮಾಡಬೇಕು. ಇದನ್ನು ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಇಡೀ ರಾಜ್ಯದಲ್ಲಿ ರಿಸಲ್ಟ್ ನಂ. 1 ಇದೆ. ಆ ಕಾಲೇಜಿನ ಕಟ್ಟಡದೊಳಗಡೆ ಕಾಡು ಬೆಳದಿರುವುದರಿಂದ ಅಲ್ಲಿ ಹಾವುಗಳು ಸೇರಿಕೊಂಡು ಕಟ್ಟಡವು ದುಸ್ಥಿತಿಯಾಗಿದೆ. ಇದು ಆಗಬಾರದು. ಕಟ್ಟಡವು ಒಳ್ಳೆಯ ಸುಂದರವಾಗಿದೆ. ಕೂಡಲೆ ಆಲ್ಲಿ ಗಿಡಗಂಟೆಗಳನ್ನು ಕೀಳಿಸುವಂತಹ ಕಾರ್ಯವನ್ನು ಮಾಡಬೇಕು.

ಅಧ್ಯಕ್ಷರು :– ಆಯಿತು. ಈಗ ತೊಗರಿ ಬೆಳೆಗೆ ಸಂಬಂದಪಟ್ಟಂತೆ ತೆಗೆದುಕೊಳ್ಳೋಣ. ಮಾನ್ಯ ಉಮೇಶ್ ಕತ್ತಿಯವರೆ ತಾವು ಉತ್ತರವನ್ನು ಕೊಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ತೊಗರಿ ಬೆಳೆಗಾರರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕಾಗಿದೆ.

ಅಧ್ಯಕ್ಷರು :– ತಾವು ಹೇಳಿದ್ದೀರಿ, ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

ಶ್ರೀ ಬಂಡೆಪ್ಪ ಖಾಶಂಪೂರ್ :– ಮಾನ್ಯ ಅಧ್ಯಕ್ಷರೆ, ಇದು ಶೂನ್ಯವೇಳೆಯಲ್ಲಿ ಬಂದಿದೆ.

ಅಧ್ಯಕ್ಷರು :– ನಿನ್ನೆ ತಾವು ಈ ಬಗ್ಗೆ ಮಾತನಾಡಿದ್ದೀರಿ. ಮತ್ತೆ ಮತ್ತೆ ತಾವು ಏನು ಮಾತನಾಡುತ್ತೀರಿ?ಈಗ ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಚಿವರು ಉತ್ತರವನ್ನು ಹೇಳವುದಕ್ಕಿಂತ ಮುಂಚೆ ಮಾನ್ಯ ಸದಸ್ಯರಾದ ಶ್ರೀ ಬಂಡೆಪ್ಪ ಖಾಶಂಪೂರ್‌ರವರ ಹೇಳಿದ ಮೇಲೆ ನಂತರ ಉತ್ತರವನ್ನು ಹೇಳಲಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಇದು ಅವರದಲ್ಲ, ನಾನು ಗಮನ ಸೆಳೆಯುವ ಸೂಚನೆಯನ್ನು ಕೇಳಿದ್ದೇನೆ.